ಕಥೆ

# ವೃಶ್ಚಿಕ



**ಪ್ರಕಾಶ ನಾಯಕ**

ಕಲೆ: ವಿಶ್ವನಾಥ್ ಎ.ಎಸ್.

ಒಂದು ಬೆಳಗ್ಗೆ ತಡವಾಗಿಯೇ ಎದ್ದು, ಆತುರಾತುರದಲ್ಲಿ ದೈನಂದಿನ ಕೆಲಸಗಳನ್ನು ಮುಗಿಸಿಕೊಂಡು ಆಫೀಸಿಗೆ ಹೋಗಲು ತಯಾರಾಗಿ ಕನ್ನಡಿಯ ಮುಂದೆ ನಿಂತ ಆತ್ಮಾರಾಮನಿಗೆ ಎದುರಿನ ಪ್ರತಿಬಿಂಬದಲ್ಲಿ ಸ್ವತಃ ತನ್ನನ್ನು ಕಾಣದೆ ಆಘಾತವಾಯಿತು. ಅದು ತನ್ನ ಭ್ರಮೆಯಿರಬಹುದೆಂದು ಅನುಮಾನಿಸಿ ಬೇರೆಬೇರೆ ಕೋನಗಳಲ್ಲಿ ನಿಂತು ಪರೀಕ್ಷಿಸಿದರೂ ಪ್ರಯೋಜನವಾಗಲಿಲ್ಲ. ಬೇಕು ಬೇಡದ ಸಾಮಾನುಗಳಿಂದ ತುಂಬಿತುಳುಕುತ್ತಿದ್ದ ಆ ಒಂದು ರೂಮಿನ ಅಪಾರ್ಟ್‌ಮೆಂಟಿನಲ್ಲಿ ಅಂತಹ ಕೋನಗಳು ಬಹಳಷ್ಟೇನಿರಲಿಲ್ಲ. ಈ ಕನ್ನಡಿಯೆನ್ನುವ ಸ್ವಕುಚಮರ್ದನವೂ ತನಗಿಂದು ಅನಾಮತ್ತಾಗಿ ಕೈಕೊಡಲು ಕಾರಣವೇನೆಂದು ತಲೆ ಕೆಡಿಸಿಕೊಂಡು, ಲ್ಯಾಪ್‌ಟಾಪ್ ಚೀಲ, ಊಟದ ಡಬ್ಬಿ, ಕೆಲಸದ ಬ್ಯಾಡ್ಜುಗಳನ್ನು ಎತ್ತಿಕೊಂಡು ಮತ್ತೆ ಕನ್ನಡಿಯ ಮುಂದೆ ನಿಂತ. ಅಲ್ಲಿಯವರೆಗೂ ಕನ್ನಡಿಯ ಪ್ರತಿಬಿಂಬದಲ್ಲಿ ಮೆರೆಯುತ್ತಿದ್ದ ಅವು ತನ್ನ ಕೈಗೆ ಬಂದಾಕ್ಷಣ ತಮಗೂ ಸಹವಾಸದೋಷ ತಾಕಿತು ಎನ್ನುವಂತೆ ಮಾಯವಾಗುವುದನ್ನು ನೋಡಿದಾಗ ಗಾಬರಿಯಾಯಿತು. ಹೆದರುತ್ತಲೇ ಕನ್ನಡಿಯೆಡೆಗೆ ನೋಡಿದ; ಇಡೀ ರೂಮಿನಲ್ಲಿ ಎಲ್ಲೆಂದರಲ್ಲಿ ಬಿದ್ದುಕೊಂಡಿದ್ದ ಸಕಲಸಾಮಾನುಗಳೂ ಪ್ರತಿಬಿಂಬದಲ್ಲಿ ದರ್ಶನಕೊಟ್ಟು ಅವನನ್ನು ಅಣಕಿಸಿದವು. ಕೈಲಿದ್ದವುಗಳನ್ನು ಬಿಸುಟಿ ತಲೆದಿಂಬನ್ನು ಹಿಡಿದುಕೊಂಡು ಸೋಫಾದ ಮೇಲೆ ಕುಸಿದು ಕುಳಿತ. ಆಗುತ್ತಿರುವುದೆಲ್ಲವೂ ಕರಾಳ ಕನಸಿನಷ್ಟೇ ನೈಜವಾಗಿತ್ತು, ಭೀಕರವಾಗಿತ್ತು, ತರ್ಕಹೀನವಾಗಿತ್ತು.

ಇಂತಹ ಅನುಭವಗಳು ಅವನಿಗೆ ಆ ಮೊದಲೂ ಆಗಿದ್ದವು. ಎಣಿಸಲಾಗದಷ್ಟು ಸಲ, ವಿಂಗಡಿಸಲಾಗದಷ್ಟು ರೀತಿಯ ಆ ಅನುಭವಗಳಿಗೂ, ಹಠಾತ್ತನೆ ಹೆಡೆಯೆತ್ತಿರುವ ಈ ವಿದ್ಯಮಾನಕ್ಕೂ ಇದ್ದ ಸಾಮಾನ್ಯ ಎಳೆಯೆಂದರೆ ತಾನು ಏನೂ ಅಲ್ಲದಂತೆ ಇಲ್ಲವಾಗಿರುವುದು ಮಾತ್ರ; ಅವೆಲ್ಲವೂ ಒಂದೆರಡು ನಿಮಿಷಗಳಲ್ಲಿ ಕರಗಿ ಹೋಗುತ್ತಿದ್ದವು; ಯಾವುದೂ ಇಂದಿನ ಹಾಗೆ ದೈನಂದಿನ ಲಯ ತಪ್ಪಿಸುಷ್ಟು ದೀರ್ಘವಾಗಿರಲಿಲ್ಲ. ಯಾಕೆ ಹೀಗಾಗುತ್ತಿರಬಹುದು... ಚಿಂತಿಸಿದಷ್ಟೂ ವಿಷಯ ಗೋಜಲಾಗುತ್ತ ಹೋಯಿತು.

ಆಫೀಸಿಗೆ ಆಗಲೇ ತಡವಾಗತೊಡಗಿತ್ತು. 'ಈ ನನ್ನಮಗಂದು, ಯಾಕೋ ಈವತ್ತು ಎದ್ದ ಗಳಿಗೆನೇ ಸರಿ ಇಲ್ಲ. ಎಷ್ಟು ಹೊತ್ತಾದ್ರೂ ಸರಿ ಹೋಗ್ತಾನೇ ಇಲ್ಲ!' ಎಂದು ಗಟ್ಟಿ ದನಿಯಲ್ಲಿ ಗಂಟಲು-ಕಿವಿಗಳನ್ನೂ ಪರೀಕ್ಷೆಮಾಡುವವನಂತೆ ಒದರಿ, ಕಾಫಿ ಕುಡಿದು ಆಫೀಸಿಗೆ ಹೋಗಿ ಮುಟ್ಟುವಷ್ಟರಲ್ಲಿ ಈ ಭ್ರಮೆಯೂ ಕರಗಿಹೋಗುತ್ತದೆ ಅಂದು ಸಮಾಧಾನಿಸಿಕೊಂಡ; ಕನ್ನಡಿಯ ಕಡೆಗೆ ದೃಷ್ಟಿಹಾಯಿಸಲು ಧೈರ್ಯ ಸಾಲದೆ ತನ್ನಷ್ಟಕ್ಕೆ, 'ಎಲ್ಲಾ ಸರಿಯಿದೆ. ನಾನೂ ಸರಿಯಿದ್ದೇನೆ'